**ದಿಃ 21-09-2021 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಇ ಎಂ ವಕೀಲರಿಂದಃ**

7. 1 ನೇ ಪ್ರತಿವಾದಿ ಸಿದ್ದಯ್ಯ ನೌಕರಿ ಮಾಡುವ ಕಾಲದಿಂದ ಅಂತ ಹೇಳಿದ್ದು ಸುಮಾರು 43 ವರ್ಷದಿಂದ ಚಿತ್ರದುರ್ಗದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ಹೆಚ್ ಡಿ ಪುರದಲ್ಲಿ ವಾಸವಾಗಿದ್ದು ಆ ಕಾಲಕ್ಕೆ ನನ್ನ ಅಕ್ಕ ಸಿದ್ದಮ್ಮ ಮತ್ತು ಅವರ ಮಗ ಮಂಜುನಾಥ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ತಾಯಿಯ ಪಾಲನೆ ಪೋಷಣೆಯನ್ನು ಸಿದ್ದಮ್ಮ ಮತ್ತು ಅವರ ಮಗ ಮಂಜುನಾಥ ಮಾತ್ರ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ ಗಂಡ ಸತ್ತ ನಂತರ ನಾನು ಸಹ ಆಗಾಗ್ಗೆ ನೋಡಿಕೊಳ್ಳುತ್ತಿದ್ದರು ಮತ್ತು 1 ನೇ ಪ್ರತಿವಾದಿ ಆಗಾಗ್ಗೆ ಹೋಗಿ ನೋಡಿಕೊಳ್ಳುತ್ತಿದ್ದರು ಅನ್ನುತ್ತಾರೆ. ಕೊನೆಯವರೆಗೆ 2 ನೇ ಪ್ರತಿವಾದಿ ಮತ್ತು ಅವರ ಮಗ ಮಂಜುನಾಥ ನಮ್ಮ ತಂದೆ ತಾಯಿಯನ್ನು ನೋಡಿಕೊಂಡಿದ್ದಾರೆ ಎಂದರೆ ಸರಿ. ಈ ರೀತಿ 2 ನೇ ಪ್ರತಿವಾದಿ ಸಿದ್ದಮ್ಮ ಮತ್ತು ಅವರ ಮಗ ನನ ತಂದೆ ತಾಯಿಯನ್ನು ಅವರ ಕಷ್ಟ ಸುಖದಲ್ಲಿ ಭಾಗಿಯಾಗಿ ಜೊತೆಗೆ ಇದ್ದು ನೋಡಿಕೊಂಡ ಕಾರಣ ನನ್ನ ತಂದೆ ತಾಯಿಯ ಪಿತ್ರಾರ್ಜಿತವಾಗಿ ಬಂದು ಆಸ್ತಿಯಲ್ಲಿ ಅರ್ಧ ಭಾಗ 2 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ 2 ನೇ ಪ್ರತಿವಾದಿ ಸಿದ್ದಮ್ಮಳು ನನ್ನ ತಂದೆ ತಾಯಿಯನ್ನು ಕೊನೆಯವರೆಗೆ ನೋಡಿಕೊಂಡಳು ಅಂತ ನಾನು ಒಪ್ಪಿದ್ದು, ಆದಾಗ್ಯೂ ಅವರಿಗೆ ಯಾವುದೇ ಭಾಗದ ಆಸ್ತಿ ಕೊಟ್ಟಿಲ್ಲವೇ ಎಂದು ಸೂಚಿಸಿದ ಪ್ರಶ್ನೆಗೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಗೆ ಆಳು ಕಾಳುಗಳನ್ನು ಇಟ್ಟುಕೊಂಡು ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು.

8. ಸಿದ್ದಮ್ಮಳ ಗಂಡನ ಹೆಸರು ಕರಿಯಪ್ಪ, ಆಕೆಯನ್ನು ಚಿಕ್ಕವಳಿಂದ ತಂದು ಸಾಕಿ ಗೂಳಿಹೊಸಳ್ಳಿಯಲ್ಲಿ ಮದುವೆ ಮಾಡಿಕೊಡಲಾಯಿತು. ಕರಿಯಪ್ಪನಿಗೆ ಗೂಳಿಹೊಸಳ್ಳಿಯಲ್ಲಿ ಅವರ ಪಿತ್ರಾರ್ಜಿತವಾದ ಆಸ್ತಿ ಇತ್ತು ಎಂದರೆ ಗೊತ್ತಿಲ್ಲ. ಕರಿಯಪ್ಪನಿಗೆ ಗೂಳಿಹೊಸಳ್ಳಿಯಲ್ಲಿ

ಅವರದೇ ಆದ ಸ್ವಂತ ಆದಾಯ ಇತ್ತು ಎಂದರೆ ಸರಿಯಲ್ಲ.ನಾನು 1982 ರ ಇಸ್ವಿಯಿಂದ ನನ್ನ ಗಂಡನ ಮನೆ ಹೆಚ್ ಡಿ ಪುರದಲ್ಲಿ ಇದ್ದೆ ಅಂತ ಹೇಳಿದ್ದು ಆ ಕಾಲಕ್ಕು ನಾನು ಸಹ ನನ್ನ ತವರು ಮನೆಯಿಂದ ಆಸ್ತಿ ಕೊಡಿ ಅಂತ ಕೇಳಿಲ್ಲ. 1982 ರಿಂದ ನಾನು ಆಸ್ತಿಯಲ್ಲಿ ಭಾಗ ಕೇಳಲಿಲ್ಲ ಕಾರಣ ಇವತ್ತಲ್ಲಾ ನಾಳೇ ನನ್ನ ತಮ್ಮ ಆಸ್ತಿ ಕೊಡಬಹುದು ಸುಮ್ಮನಿದ್ದೆ ಅಂತ ನುಡಿಯುತ್ತಾರೆ. ನಮ್ಮ ತಂದೆ ತಾಯಿ ಕುಟುಂಬಕ್ಕೆ ಇಷ್ಟು ಆದಾಯ ಇತ್ತು ಅಂತ ಹೇಳಿದ್ದು ಆ ಬಗ್ಗೆ ಬೇರೆ ದಾಖಲೆ ಹಾಜರು ಮಾಡಿದ್ದೇನೆ.

9. ಸರ್ವೇ ನಂ.83 ರಲ್ಲಿ ಎಷ್ಟು ಎಕರೆ ಇದೆ ಅಂತ ಹೇಳಲು ಆಗುವುದಿಲ್ಲ. ಅದರ ಚೆಕ್ ಬಂದಿ ಹೇಳಲು ಆಗುವುದಿಲ್ಲ. ನಾನು ಪ್ರತಿವಾದಿಯರ ಜೊತೆಗೆ ಜಮೀನುಗಳನ್ನು ಒಟ್ಟಿಗೆ ಅನುಭವಿಸಿಲ್ಲ ಅವುಗಳನ್ನು ನೋಡಿಯೂ ಸಹ ಇಲ್ಲ ಆ ಕಾರಣಕ್ಕೆ ನಾನು ಅದರ ವಿವರಗಳನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-1 ಈಗಲೂ ಸಹ ಬೆದ್ದಲು ಜಮೀನು ಎಂದರೆ ಸರಿ. ಅದಕ್ಕೆ ಯಾವುದೇ ಬೊರವೆಲ್ ಮತ್ತು ನೀರಾವರಿ ಸೌಲಭ್ಯ ಇಲ್ಲ ಎಂದರೆ ಸರಿ. ಸರ್ವೇ ನಂ.83 ಕ್ಕೆ ನಾನು ಹೋಗಿಯೇ ಇಲ್ಲ ನಾನು ಚಿಕ್ಕಂದಿನಿಂದಲೂ ಹೋಗಿಯೇ ಇಲ್ಲ ಅಂತ ನುಡಿಯುತ್ತಾರೆ. ಸದರಿ ಜಮೀನು ಕೇವಲ ಜಾಲಿ ಗಿಡಗಳು ಮಾತ್ರ ಬೆಳದಿವೆ ಎಂದರೆ ಸರಿ. ಸರ್ವೇ ನಂ.85/1 ಎ ಎಷ್ಟು ಎಕರೆ ಮತ್ತು ಅದರ ವಿವರ ನನಗೆ ಗೊತ್ತಿಲ್ಲ. ಚೆಕ್ ಬಂದಿ ಹೇಳಲು ಆಗುವುದಿಲ್ಲ. ಸದರಿ ಜಮೀನು ನನ್ನ ತಾತನ ಕಡೆಯಿಂದ ಬಂದಿದ್ದು ಅದು ಕೂಡ ಬೆದ್ದಲು ಜಮೀನು ಎಂದರೆ ಸರಿ. ಸರ್ವೇ ನಂ.101/3 ಐಟಂ ನಂ.3 ಆಸ್ತಿ ಎಷ್ಟು ಎಕರೆ ಮತ್ತು ವಿಸ್ತೀರ್ಣ ಮತ್ತು ಚೆಕ್ ಬಂದಿ ಗೊತ್ತಿಲ್ಲ.

10. 1 ನೇ ಪ್ರತಿವಾದಿ ನನ್ನ ಅಣ್ಣ ಚಿತ್ರದುರ್ಗದ ಎಸ್ ಜೆ ಎಂ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದರಿಂದ ಒಳ್ಳೆಯ ಸಂಬಳ ಬರುತ್ತಿತ್ತು ಎಂದರೆ ಸರಿ. ಐಟಂ ನಂ.4 ಇದರ ಸರ್ವೇ ನಂ.101/1 ಎ ಅವರು ಸ್ವಂತ ಆದಾಯದಿಂದ 2001 ನೇ ಸಾಲಿನಲ್ಲಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತೋಟದ ಆದಾಯ ವರ್ಷಕ್ಕೆ ಎಷ್ಟಿತ್ತು ಅಂತ ತೋರಿಸಲು ದಾಖಲೆ ಹಾಜರು

ಮಾಡಿದ್ದೇನೆ.

11. ದಾವಾ ಐಟಂ ನಂ.2 ಸರ್ವೇ ನಂ.119/2, ಎಷ್ಟು ಎಕರೆ, ವಿಸ್ತೀರ್ಣ ಮತ್ತು ಚೆಕ್ ಬಂದಿ ಗೊತ್ತಿಲ್ಲ. ಅದು ಬೀಳು ಜಮೀನು ಆಗಿರುತ್ತದೆ. ಸರ್ವೇ ನಂ.94/2 ದಾವಾ ಷೆಡ್ಯೂಲ್ ಐಟಂ ನಂ.11 ಇದು 2 ನೇ ಪ್ರತಿವಾದಿಯ ಹೆಸರಲ್ಲಿ ಇದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಪಿಃ1ರ ದಾಖಲೆ ದಾನಪತ್ರ ಕ್ಕೆ ನನ್ನ ಗಂಡ ಬಸವಲಿಂಗಪ್ಪ ಸಹಿ ಮಾಡಿದ್ದಾರೆ ಎಂದರೆ ಸರಿ . ಅದರಲ್ಲಿ ಸಿದ್ದಮ್ಮಳು ತನ್ನ ಸ್ವಯಾರ್ಜಿತವಾದ ಆಸ್ತಿ ಎಂದು ಕಾಣಿಸಿದ್ದಾರೆ ಎಂದರೆ ಸರಿ. ಅದು ಸುಳ್ಳಾಗಿ ಕಾಣಿಸಿದ್ದಾರೆ ಅಂತ ನುಡಿಯುತ್ತಾರೆ. ಅದೇ ರೀತಿ ಐಟಂ ನಂ.12 ಸರ್ವೇ ನಂ. 94/4 ಒಟ್ಟು 6 ಎಕರೆ 35 ಗುಂಟೆ ಆಸ್ತಿಯನ್ನು ಕೂಡ 2 ನೇ ಪ್ರತಿವಾದಿ ಸಿದ್ದಮ್ಮಳು ಸ್ವಂತ ಗಳಿಸಿದ್ದು ಎಂದರೆ ಸುಳ್ಳು. 1 ನೇ ಪ್ರತಿವಾದಿ ನನ್ನ ಅಣ್ಣ ಚಿತ್ರದುರ್ಗ ಮರ್ಚಂಟ್ ಬ್ಯಾಂಕಿನಲ್ಲಿ 3 ಕೋಟಿ ಹಣ ಇಟ್ಟಿದ್ದಾರೆ ಅಂತ ಹೇಳಿದ್ದು ಆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. 3 ರಿಂದ 4 ಕೆ ಜಿ ಬಂಗಾರ ಇಟ್ಟುಕೊಂಡಿದ್ದಾರೆ ಅಂತ ತೋರಿಸಲು ದಾಖಲೆ ಕೊಟ್ಟಿದ್ದೇನೆ. ಈ 3 ರಿಂದ 4 ಕೆ ಜಿ ಗಟ್ಟಿ ಬಂಗಾರ ಇಲ್ಲ. ಒಡವೆಗಳು. ಇವು ಸರಗಳು, ಚೈನ್ ಗಳು, ನೆಕಲೆಸ್ ಗಳು ಆಗಿವೆ ಈ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ಎಷ್ಟು ಸರಗಳು, ಎಷ್ಟು ನೆಕಲೆಸ್ ಗಳು ಮತ್ತು ಎಷ್ಟು ಉಂಗುರುಗಳು ಇವೆ ಅಂತ ದಾವಾದಲ್ಲಿ ವಿವರ ಕಾಣಿಸಿಲ್ಲ ಎಂದರೆ ಸರಿ. ಅದೇ ರೀತಿ ಮೇಲೆ ಹೇಳಿದ ಎಫ್ ಡಿ ಇದೆ ಹೇಳಿದ್ದು ಅದರ ವಿವರ ದಾವಾದಲ್ಲಿ ಕಾಣಿಸಿಲ್ಲ ಎದಂರೆ ಸರಿ. ನನ್ನ ಅಣ್ಣ ಚಿತ್ರದುರ್ಗದ ಜೆ ಸಿ ಆರ್ ಎಕ್ಸಟೆನಶನ್ ಬಡಾವಣೆ 43 ನೇ ವಾರ್ಡನಲ್ಲಿ ಅವರದೇ ಸ್ವಂತ ಮನೆ ಕಟ್ಟಿಸಿಕೊಂಡು ವಾಸ ಇದ್ದಾರೆ ಎಂದರೆ ಸರಿ. ಅವರಿಗೆ ಸರಕಾರದಿಂದ ನಿವೃತ್ತಿ ವೇತನ ಬರುತ್ತದೆ ಎಂದರೆ ಸರಿ. ಅವರಿಗೆ ಸಂಬಳ ಮತ್ತು ಪೆನಶನ್ ಎಲ್ಲವನ್ನು ಕಳೆದು ಹಣ ಉಳಿಯುತ್ತದೆ ಎಂದರೆ ಸರಿಯಲ್ಲ.1 ರಿಂದ 9 ದಾವಾ ಷೆಡ್ಯೂಲ್ ಸ್ವತ್ತುಗಳು ನನ್ನ ತಂದೆಗೆ ಬೆದ್ದಲು ಜಮೀನು ಬಂದಿದ್ದು ಅದರಲ್ಲಿ ಯಾವುದೇ ರೀತಿಯ ತೋಟ ಇರಲಿಲ್ಲ ಎಂದರೆ ಸರಿಯಲ್ಲ. 16 ಎಕರೆ ತೋಟ ನನ್ನ ತಂದೆ ಮಾಡಿದ್ದರು ಅಂತ ಸ್ವತಃ ನುಡಿಯುತ್ತಾರೆ. ಯಾವ ಸರ್ವೇ ನಂಬರಿನಲ್ಲಿ ಎಷ್ಟೆಷ್ಟು ತೋಟ ಮಾಡಿದ್ದರು ಅಂತ ಗೊತ್ತಾಗುವುದಿಲ್ಲ ಆದ್ದರಿಂದ ಹೇಳಲು

ಆಗುವುದಿಲ್ಲ. ನನಗೆ ತಂದೆಗೆ ಯಾವುದೇ ಆದಾಯ ಇಲ್ಲದೆ ಇರುವ ಕಾರಣ 1 ನೇ ಪ್ರತಿವಾದಿ ತನ್ನ ಸಂಬಳದಲ್ಲಿ ಮತ್ತು ಆದಾಯದಲ್ಲಿ ಉಳಿತಾಯ ಮಾಡಿ ತೋಟ ಮಾಡಿ ಜಮೀನು ಅಭಿವೃದ್ಧಿ ಗೊಳಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಮತ್ತು ನಮ್ಮ ಒಟ್ಟು ಕುಟುಂಬಕ್ಕೆ ಎಷ್ಟು ಆದಾಯ ಇತ್ತು , ಇಷ್ಟು ಖರ್ಚಾಗಿತ್ತು, ಇಷ್ಟು ಉಳಿತಾಯ ಇತ್ತು ಅಂತ ಎಂದು ನನ್ನ ದಾವಾದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

12. ನಾನು ದಾವಾ ಷೆಡ್ಯೂಲ್ ನಲ್ಲಿ ಕಾಣಿಸಿದಂತೆ ಐಟಂ ನಂ.14 ರಲ್ಲಿ ವಿವರಿಸಿದಂತೆ ಯಾವುದೇ ಕಪ್ಪು ಹಂಚಿನ ಮಾಳಿಗೆ ಮನೆ ಇಲ್ಲ ಎಂದರೆ ಸರಿಯಲ್ಲ. ಇದೇ ಐಟಂ ನಂ.14 ಪಕ್ಕದಲ್ಲಿ ಎರಡು ಸೈಟ್ ಖರೀದಿಸಿ 1 ನೇ ಪ್ರತಿವಾದಿ ಖರೀದಿಸಿ ಮನೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಈಗ ಕಪ್ಪು ಹಂಚಿನ ಮನೆಯನ್ನು ಬೇರೆಯ ರೀತಿ ಪರಿವರ್ತಿಸಿದ್ದಾರೆ.

13. ಸಾಮಾನ್ಯವಾಗಿ ಅಡಿಕೆ ತೋಟ ಮಾಡಬೇಕಾದರೆ ಬೋರವೆಲ್ ಅವಶ್ಯಕತೆ ಇದೆ ಎಂದರೆ ಸರಿ. ನಮ್ಮ ಊರು ಕೊಳಹಾಳು ಗ್ರಾಮದಲ್ಲಿ ಬೊರವೆಲ್ ನೀರು ಬರಬೇಕಾದ್ದಲ್ಲಿ 800 ರಿಂದ 1000 ಅಡಿ ಕೊರೆಸಬೇಕಾಗುತ್ತದೆ ಎಂದರೆ ಸರಿ. ಕಳೆದು ಸುಮಾರು ವರ್ಷದಿಂದ ಸರಿಯಾದ ಮಳೆ ಆಗುತ್ತಿಲ್ಲ ಎಂದರೆ ಸರಿ. ಈ ಸಂಬಂಧ ನನ್ನ ಅಣ್ಣ ಸುಮಾರು 25 ರಿಂದ 30 ಬೊರಗಳನ್ನು ನನ್ನ ಅಣ್ಣ 1 ನೇ ಪ್ರತಿವಾದಿ ಕೊರೆಸಿದ್ದಾರೆ ಎಂದರೆ ಸರಿ. ಅಷ್ಟೆಲ್ಲಾ ಬೊರಗಳನ್ನು ಕೊರೆಸಿದ್ದರೂ ಕಾಲಕಾಲಕ್ಕೆ ಮಳೆ ಬರದೆ ಇದ್ದ ಕಾರಣ ನೀರಿನ ಅಭಾವದಿಂದ ತೋಟ ಉಳಿಯುವ ಪರಿಸ್ಥಿತಿಯಲ್ಲಿ ಇಲ್ಲ ಎಂದರೆ ಸರಿ. ಹಾಗಾಗಿ ಅಡಿಕೆ ತೋಟವನಲ್ಲು ಉಳಿಸಿಕೊಳ್ಳುವುದು ಕಷ್ಟವಾಗಿದೆ ಎಂದರೆ ಸರಿ. ಆ ಕಾರಣಕ್ಕೆ ನನ್ನ ಅಣ್ಣ ಬೇರೆ ಕಡೆಯಿಂದ ಸಾಲ ವಗೆರೆ ಮಾಡಿ ಅಷ್ಟೊಂದು ಬೊರಗಳನ್ನು ಕೊರೆಸಿದ್ದಾರೆ ಎಂದರೆ ಸರಿಯಲ್ಲ. ಒಂದು ಬೊರ ಕೊರಸಿ ಬೆಸ್ಕಾಂನಿಂದ ಸಂಪರ್ಕ ಪಡೆದು ಮೋಟಾರ್ ಇಳಿಸಿ ಚಾಲನೆ ಗೊಳಿಸುವವರೆಗೆ ಸುಮಾರ 4–5 ಲಕ್ಷ ಖರ್ಚಾಗುತ್ತದೆ ಎಂದರೆ ಸರಿಯಲ್ಲ. 1 ಲಕ್ಷ ಖರ್ಚಾಗುತ್ತದೆ. ನಾನು ಹೇಳಿದಂತೆ ನಾನು ಯಾವುದೇ ಅಡಿಕೆ ತೋಟದಿಂದಆದಾಯ ಬರದೆ ಅವು ಉಳಿಯುವ ಪರಿಸ್ಥಿತಿಯಲ್ಲಿ ಇಲ್ಲದೆ ಇರುವ ಕಾರಣ

ಯಾವುದೇ ಫಸಲು ಇಲ್ಲ ಬೀಳು ಬಿಟ್ಟಿದೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಅಡಿಕೆ ತೋಟದಿಂದ ಅಡಿಕೆ ಫಸಲು ಸಿಗುತ್ತಿದ್ದ ಬಗ್ಗೆ ಮತ್ತು ಯಾವ ಮಂಡಿಗೆ ಹಾಕುತ್ತಿದ್ದು ಮತ್ತು ಎಷ್ಟು ಹಣ ಬರುತ್ತಿತ್ತು ಅಂತ ದಾವಾದಲ್ಲಿ ಕಾಣಿಸಿಲ್ಲ ಮತ್ತು ಬರೆಸಿಲ್ಲ. ನಾನು ಹೇಳಿದಂತೆ ನನ್ನ ಅಣ್ಣ ಅಡಿಕೆ ತೋಟದಿಂದ ಅಂದರೆ ಒಟ್ಟು ಕುಟುಂಬದಿಂದ ಆದಾಯ ಬರುತ್ತಿತ್ತು ಅದರಿಂದ ಮನೆ ಕಟ್ಟಿಸಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾಡುವ ಉದ್ಯೋಗದಿಂದ ಸಾಕಷ್ಟು ಆದಾಯ ಇದ್ದು ಒಟ್ಟು ಕುಟುಂಬ ಆದಾಯವನ್ನು ಮನೆ ಕಟ್ಟುವ ಉದ್ದೇಶಕ್ಕೆ ಬಳಿಸಿಲ್ಲ ಎಂದರೆ ಸರಿಯಲ್ಲ. 1982 ರಲ್ಲಿನಾನು ಮದುವೆಯಾಗಿ ನನ್ನ ಗಂಡನ ಊರಿಗೆ ಹೊರಗು ಅಲ್ಲಿಯೇ ವಾಸ ಇದ್ದು ಆ ಕಾಲದಿಂದಲೂ 1 ನೇ ಪ್ರತಿವಾದಿಯ ಅಣ್ಣನ ಜೊತೆ ಸಂಪರ್ಕ ಸಂಬಂಧ ಉಳಿಸಿಕೊಂಡಿಲ್ಲ ಮತ್ತು ಊರಿಗೂ ಬಂದಿಲ್ಲ ಹಾಗಾಗಿ ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹ ಮತ್ತು ಹಕ್ಕು ಇಲ್ಲದೆ ಇದ್ದರೂ ನನ್ನ ಗಂಡ ಮತ್ತು ನನ್ನ ಮಗಳ ಚಿತಾವಣೆಯ ಮೇರೆಗೆ ಸುಳ್ಳು ಸಂಗತಿಗಳನ್ನು ಸಲ್ಲಿಸಿ ಸುಳ್ಳು ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ.

14. ದಾವಾದ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ವಾದ ಪತ್ರದಲ್ಲಿ 2 ನೇ ಪ್ಯಾರಾದಲ್ಲಿ ಕಾಣಿಸಿದಂತೆ ನನ್ನ ತಂದೆ ಕೆಂಚಪ್ಪನಿಗೆ ಇಬ್ಬರು ಪತ್ನಿಯರು ಇದ್ದ ಬಗ್ಗೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ಆದರೆ ಬರೆಸಬೇಕಾಗಿತ್ತು ಅಂತ ನುಡಿಯುತ್ತಾರೆ. ನಾನು ಒಟ್ಟು ಕುಟುಂಬದ ಸದಸ್ಯೆ ಆಗದೆ ಇದ್ದ ಕಾರಣದಿಂದಲೇ ನಾನು ನನ್ನ ಕುಟುಂಬದ ಯಾವುದೇ ಮಾಹಿತಿಯನ್ನು ಕೊಡದೆ ಆಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಟ್ರಾಕ್ಟರ್ , ಟ್ರೇಲರ್ ಮತ್ತು ಓಮಿನಿ ಕಾರು ಇತ್ತು ಅಂತ ಹೇಳಿದ್ದು ಆಬಗ್ಗೆ ಯಾವುದೆ ದಾಖಲೆ ಹಾಕಿಲ್ಲ ಕಾರಣ ಆ ರೀತಿ ಯಾವುದೇ ಸಂಗತಿಗಳನ್ನು ನನಗೆ ಗೊತ್ತೆ ಇಲ್ಲ ಎಂದರೆ ಸರಿಯಲ್ಲ.1 ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ಐಟಂ ನಂ.11 ಮತ್ತು 12 ನ್ನು ಗಳಿಸಿದ್ದಾರೆ ಅದಕ್ಕೂ ಮತುತ ನಮ್ಮ ಒಟ್ಟು ಕುಟುಂಬಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 1982 ರಿಂದಲೇ ನನಗೆ ಬರಬೇಕಾದ ಎಲ್ಲವನ್ನು ಪಡೆದುಕೊಂಡು ನನ್ನ ಗಂಡನ ಮನೆಯಲ್ಲಿ ಇಲ್ಲಿಯವರೆಗೂ

ಇದ್ದುಕೊಂಡು ಬಂದಿದ್ದು ನಾನು ಒಟ್ಟು ಕುಟುಂಬದ ಸದಸ್ಯೆ ಅಲ್ಲ ಆದರು ಸುಳ್ಳು, ಸಂಗತಗಳ ದಾವಾ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ 1 ನೇ ಪ್ರತಿವಾದಿ ಲೆಕ್ಚರ್ ಆಗಿದ್ದರಿಂದ ಆತನಿಂದಆಗಾಗ್ಗೆ ಆರ್ಥಿಕ ಸಹಾಯ ಪಡೆದಿದುಜ್ದ ಅದನ್ನ ಮರು ಪಾವತಿಸಲು ಕೇಳಿದ್ದಕ್ಕೆ ಈ ಸುಳ್ಳಾ ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿಯಾವುದೇ ಹಕ್ಕು ಅಧಿಕಾರ ಇರದೆ ಇದ್ದರೂ ಸಹ ಪಾಲು ಬೇಕು ಅಂತ ಸುಳ್ಳು ದಾವಾ ತಂದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ